ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಒಂದು ಅಡ್ಜರ್ನ್‌ಮೆಂಟ್ ಮೋಷನ್ ಇದೆ.

ಅಧ್ಯಕ್ಷರು : ಈಗ ಏನಾಗಿದೆ ಎಂದರೆ ಇಲ್ಲಿಗೆ ಮುಕ್ತಾಯ ಮಾಡೋಣ. ಮಾನ್ಯ ವಿರೋಧ ಪಕ್ಷದವರು....

3. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ:– ಹೊಸ ಮಂತ್ರಿಗಳ ಪರಿಚಯ ಮಾಡುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಹೊಸ ಮಂತ್ರಿ ಮಂಡಲವನ್ನು ರಚನೆ ಮಾಡಿದ್ದೀರಿ, ಯಾರ್ಯಾರು ಮಂತ್ರಿಗಳಾಗಿದ್ದಾರೆ ಎಂಬುದನ್ನು ಸದನಕ್ಕೆ ಪರಿಚಯಿಸಬೇಕು. ಅದು ಸಂಪ್ರದಾಯ.

ಶ್ರೀ ಡಿ.ಕೆ. ಶಿವಕುಮಾರ್ : ಮೊದಲೇ ಕೇಳಬೇಕಾಗಿತ್ತು, ಅವರು ಮಾಡುತ್ತಾರೆ. ನೀವು ಅದನ್ನು ಮೊದಲೇ ಕೇಳಬೇಕಾಗಿತ್ತು.

ಶ್ರೀ ವಾಟಾಳ್ ನಾಗರಾಜ್ : ಯಾರ್ಯಾರು ಮಂತ್ರಿಗಳಾಗಿದ್ದಾರೆ ಎಂದು ತಿಳಿಸುವುದು ಸದನದ ಸಂಪ್ರದಾಯ, ಸಂಸದೀಯ ನಡವಳಿಕೆ, ಮಾನ್ಯ ಮುಖ್ಯಮಂತ್ರಿಯವರು ತಮ್ಮ ಸಚಿವ ಸಂಪುಟವನ್ನು ವಿಸ್ತರಣೆ ಮಾಡಿದ್ದಾರೆ. ಅದರಲ್ಲಿ ಯಾರಾರು ಮಂತ್ರಿಗಳಾಗಿದ್ದಾರೆ ಎಂಬುದನ್ನು ತಾವು ಸದನಕ್ಕೆ ಪರಿಚಯ ಮಾಡಬೇಕು. ಅದು ಸಂಪ್ರದಾಯ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಆಧ್ಯಕ್ಷರೆ....

ಅಧ್ಯಕ್ಷರು : ಮಾನ್ಯ ದೇಶಪಾಂಡೆಯವರೆ, ಎಲ್ಲರೂ ಮಾತನಾಡಿದ್ದಾರೆ. ಮತ್ತೇಕೆ? ಎಲ್ಲರೂ ಮಾತನಾಡಬೇಕು ಎನ್ನುವುದು ಬೇಡಿ. ಸಾಕು

4. ನಿಯಮ 69ರ ಮೇಲಿನ ಚರ್ಚೆ (ಮುಂದುವರಿದುದು)

ವಿಷಯ:– ನೈಸ್ ಕಂಪನಿಯ ಪರವಾಗಿ ಮುಖ್ಯಮಂತ್ರಿಗಳಿಗೆ ಲಂಚದ ಆಮಿಷ ಒಡ್ಡಿದರು ಎನ್ನಲಾದ ಬಗ್ಗೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ನಾನು ಎರಡು ನಿಮಿಷದಲ್ಲಿ ಮುಗಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಬಹಳ ಸ್ಪಷ್ಟವಾಗಿ ತಾನು, ಮಾಜಿ ಮಂತ್ರಿ ಹಾಗೂ ಜರ್ನಲಿಸ್ಟ್ ಬಗ್ಗೆ ಯಾವುದೇ ಆಪಾದನೆ ಮಾಡಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಮಂತ್ರಿಮಂಡಲ ವಿಸ್ತರಣೆಯಾಯಿತು. ಹಾಗಾಗಿ ಆ ಪವಿತ್ರ ಸ್ಥಾನದಿಂದ ಜವಾಬ್ದಾರಿಯಿಂದ ಹೇಳಿಕೆ ಕೊಟ್ಟನಂತರ ನಾವು ಅವರಿಗೆ ಗೌರವ ಕೊಡಬೇಕಾಗುತ್ತದೆ. ನಾನು ಈ ಸದನದಲ್ಲಿ ಇಷ್ಟೇ ಹೇಳುತ್ತೇನೆ, ಯಾವ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳು ಇವತ್ತು ಹೇಳಿದರು, ಅದೇ ವಿಚಾರವನ್ನು ಮೊನ್ನೆ ಹೇಳಿದ್ದರೆ ಸದನದ ಕಾರ್ಯಕಲಾಪ